# ಪುರಸಭಾ ಕಾರ್ಯಾಲಯ, ಉಳ್ಳಾಲ

ದಕ್ಷಿಣ ಕನ್ನಡ ಜಿಲ್ಲೆ, ಅಂಚೆ : ಉಳ್ಳಾಲ - 575 020

Website : www.ullaltown.gov.in Email : co.ullal@gmail.com

ದೂರವಾಣಿ
ಕಛೇರಿ : 2466226
ಫ್ಯಾಕ್ಸ್ : 2468226
ಸಹಾಯವಾಣಿ : 2462126


ದಿನಾಂಕ: 20–01–2010ರಂದು ಬುಧವಾರ ಅಪರಾಹ್ನ ಗಂಟೆ 3–00ಕ್ಕೆ ಸರಿಯಾಗಿ ಪುರಸಭೆಯ ಸ್ಥಾಯಿ ಸಮಿತಿ ಸಭೆಯು ಪುರಸಭಾ ಸ್ಥಾಯಿಸಮಿತಿ ಅಧ್ಯಕ್ಷರಾದ ಶ್ರೀ ಎಂ.ಮುಸ್ತಾಫ ಅಬ್ದುಲ್ಲ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸ್ಥಾಯಿಸಮಿತಿ ಸಭೆಯ ನಡವಳಿಗಳು.

ಹಾಜರಿ: ಅಧ್ಯಕ್ಷರು ಮತ್ತು ಸದಸ್ಯರು.

--------

ವಿಷಯ: 158: ಉಳ್ಳಾಲ ಪುರಸಭೆ ವ್ಯಾಪ್ತಿಯ 12ನೇ ವಾರ್ಡಿನ ಹೈದಾರಾಲಿನಗರದ ಒಳಭಾಗದಲ್ಲಿರುವ ಚರಂಡಿ ದುರಸ್ತಿ ಮಾಡಿ ಸ್ಲ್ಯಾಬ್ ಮುಚ್ಚುವಂತೆ ಸ್ಥಳೀಯ ಸದಸ್ಯರಾದ ಶ್ರೀ ಮೊಹಮ್ಮದ್ ಮುಕ್ಕಚೇರಿ ಯವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 159: ಉಳ್ಳಾಲ ಪುರಸಭೆ ವ್ಯಾಪ್ತಿಯ 12ನೇ ವಾರ್ಡಿನ ಪಿಲಾರು ದಾರಂದಬಾಗಿಲು ಮೂಡಸೈಟು ಎದುರುಭಾಗದಿಂದ ದಿನೇಶ್ ಗಟ್ಟಿಯವರ ಮನೆಯ ಎದುರುಭಾಗದ ರೋಡಿನ ಮುಂದೆ ಪಂಡಿತಹೌಸ್‌ತನಕ ಡಾಮಾರೀಕರಣ ಎದ್ದು ಹೋಗಿದ್ದು ಪ್ಯಾಚ್ ವರ್ಕ್ ಮಾಡುವರೇ ಸ್ಥಳೀಯ ಸದಸ್ಯರಾದ ಶ್ರೀಮತಿ ರತ್ನಾವತಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 160: ಉಳ್ಳಾಲ ಪುರಸಭೆ ವ್ಯಾಪ್ತಿಯ ತೊಕ್ಕೊಟ್ಟು ಜಂಕ್ಷನ್‌ನ ಹೈಮಾಸ್ಟ್ ದೀಪದಡಿಯಲ್ಲಿ ನಾಮಫಲಕ ಹಾಕುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ನಾಮಫಲಕ ಹಾಕುವುದಾಗಿ ನಿರ್ಣಯಿಸಲಾಯಿತು.

ವಿಷಯ: 161: ಉಳ್ಳಾಲ ಪುರಸಭೆ ವ್ಯಾಪ್ತಿಯ 17ನೇ ವಾರ್ಡಿನ ಟಿ.ಸಿ.ರೋಡು ಅಕ್ಕರಕೆರೆ, ದರ್ಗಾದ ಪಕ್ಕದಲ್ಲಿರುವ ಕಾಲುದಾರಿಗೆ ಹಾಗೂ ಅಲೇಕಲದಿಂದ ಉಳ್ಳಾಲಬೈಲಿಗೆ ಹೋಗುವ ಕಾಲುದಾರಿಗೆ ಇಂಟರ್‌ಲಾಕ್ ಅಳವಡಿಸುವರೇ ಸ್ಥಳೀಯ ಸದಸ್ಯರಾದ ಶ್ರೀ ಭಗವಾನ್ ದಾಸ್‌ರವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 162: ಉಳ್ಳಾಲ ಪುರಸಭೆ ವ್ಯಾಪ್ತಿಯ 17ನೇ ವಾರ್ಡಿನ ಟ್ರೇಸಿ ಬಾಯಿಯವರ ಮನೆಯಿಂದ ಕಾಶಿನಾಥರವರ ಮನೆತನಕ ದಾರಿಯನ್ನು ಅಗಲೀಕರಣ ಮಾಡಿ ಕಾಂಕ್ರೀಟು ಅಳವಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ಭಗವಾನ್ ದಾಸ್‌ರವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 163: ಉಳ್ಳಾಲ ಪುರಸಭೆ ವ್ಯಾಪ್ತಿಯ ಪೆರ್ಮನ್ನೂರು ಗ್ರಾಮ ಮತ್ತು ಪಿಲಾರು ಮದನಿ ಮಸೀದಿಯ ಮೇಲುಗಡೆ ಪುತ್ತುಭಾವನ ಮನೆಯತ್ತಿರ ನಿವಾಸಿಗಳು ಪೆರ್ಮನ್ನೂರು ಗ್ರಾಮದಿಂದ ಸೋಮೇಶ್ವರ ಗ್ರಾಮಕ್ಕೆ ನೀರಿನ ಸಂಪರ್ಕ ಕೊಡಿಸುವರೇ ನೀಡಿದ ಆಕ್ಷೇಪಣಾ ಅರ್ಜಿಯ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ನೀರಿನ ಸಂಪರ್ಕ ಕೊಡದಿರಲು ನಿರ್ಣಯಿಸಲಾಯಿತು.

ವಿಷಯ: 164:ಉಳ್ಳಾಲ ಪುರಸಭೆ ವ್ಯಾಪ್ತಿಯ 18ನೇ ವಾರ್ಡಿನಲ್ಲಿ ಈ ಕೆಳಗಿನ ಕಾಮಗಾರಿ ಮಾಡುವರೇ ಸ್ಥಳೀಯ ಸದಸ್ಯರಾದ ಶ್ರೀಮತಿ ಲಲಿತ ಸುಂದರ್‌ರವರ ಮನವಿ ಕುರಿತು.
1.ತೊಕ್ಕೊಟ್ಟು ಅಂಬೇಡ್ಕರ್ ರಂಗಮಂದಿರದ ಹಿಂಬದಿ ಇರುವ ಗೋಪಿ ಕಂಪೌಂಡು ಇದರ ಪಕ್ಕದ ಚರಂಡಿ ಕೆಲಸ.
2.ವಾಸುಕಿನಗರ ರಿಕ್ಷಾ ಡ್ರೈವರ್ ರತೀಶ್ ರವರ ಮನೆಯ ಎದುರುಗಡೆ ರಸ್ತೆಗೆ ಇಂಟರ್‌ಲಾಕ್ ಅಳವಡಿಸುವುದು.
3.ತೊಕ್ಕೊಟ್ಟು ಒಳಪೇಟೆ ಕಾತ್ಯಾಯಿನಿ ಮನೆ ಎದುರುಗಡೆ ಇರುವ ವಿದ್ಯುತ್ ಕಂಬವನ್ನು ಸ್ಥಳಾಂತರಿಸುವುದು.
ನಿರ್ಣಯ: (1)(2)ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.
3) ಈ ಬಗ್ಗೆ ಚರ್ಚಿಸಲಾಗಿ ಮೆಸ್ಕಾಂ ಇಲಾಖೆಗೆ ಪತ್ರ ಬರೆದು ನಂತರ ಪುರಸಬೆಯಿಂದ ಕಾಮಗಾರಿ ನಿರ್ವಹಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 165:ಉಳ್ಳಾಲ ಪುರಸಭೆ ವ್ಯಾಪ್ತಿಯ ಮಾಸ್ತಿಕಟ್ಟೆ ಎಂಬಲ್ಲಿ ವೋಲೋಬ್ಲಾಕ್ ಮಾಡುವರೇ ಪರವಾನಿಗೆ ನೀಡುವ ಬಗ್ಗೆ ಮಾನ್ಯ ಸಹಾಯಕ ಆಯುಕ್ತರು ಮಂಗಳೂರುರವರ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿದ್ದು ಪರವಾನಿಗೆ ನೀಡುವ ಬಗ್ಗೆ ಶ್ರೀ ಅನ್ವರ್ ಸಾಧಿಕ್ ಮತ್ತು ಶಾನವಾಝ್, ಬಿನ್ ದಿ.ಪುತ್ತುಬಾವ ಭಟ್ನಗರ, ಉಳ್ಳಾಲ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರವಾನಿಗೆ ನೀಡಲು ನಿರ್ಣಯಿಸಲಾಯಿತು.

**ಅಧ್ಯಕ್ಷರ ಅನುಮತಿ ಮೇರೆಗೆ ಬರಬಹುದಾದ ಇತರ ವಿಷಯಗಳು.**

ವಿಷಯ: 166: ಉಳ್ಳಾಲ ಪುರಸಭೆ ವ್ಯಾಪ್ತಿಯ ಈ ಕೆಳಗಿನ ಸ್ಥಳಗಳಲ್ಲಿ ರಸ್ತೆಗೆ ಮಣ್ಣು ಹಾಕಿ ಸಮತಟ್ಟುಗೊಳಿಸುವಂತೆ ಆಯಾಯ ವಾರ್ಡುನ ಸದಸ್ಯರ ಮನವಿ ಕುರಿತು.

1. ಉಳ್ಳಾಲ ಪುರಸಭೆ ವ್ಯಾಪ್ತಿಯ 24ನೇ ವಾರ್ಡು ಚೆಂಬುಗುಡ್ಡೆ ಮೆಸ್ಕಾಂ ಕಚೆರಿಯ ಮುಂದುಗಡೆ ಬಸ್ಸು ನಿಲ್ಲುವ ಸ್ಥಳಕ್ಕೆ 15ಲೋಡು
2. 8ನೇ ವಾರ್ಡು ಅಲೇಕಲ ಅರಬಿ ಮನೆ ಬಳಿ – 3ಲೋಡು
3. 8ನೇ ವಾರ್ಡು ಅಲೇಕಲ ಪಕ್ರುದ್ದೀನ್ ಮನೆ ಬಳಿ – 4ಲೋಡು
4. 9ನೇ ವಾರ್ಡು ದಾಬನ ರಸ್ತೆಗೆ – 5ಲೋಡು
5. 15ನೇ ವಾರ್ಡು ವೈದ್ಯನಾಥ ದೇವಸ್ಥಾನದ ಬಳಿ – 10ಲೋಡು
6. 16ನೇ ವಾರ್ಡು ಪ್ರಾಥಮಿಕ ಆರೋಗ್ಯ ಕೇಂದ್ರ ಬಳಿ – 6ಲೋಡು
7. 19ನೇ ವಾರ್ಡು ಉಳ್ಳಾಲಬೈಲು ಗೋಳಿದ ಮುಗೇರು ಜಾತ್ರೆ ನಡೆಯುವುದರಿಂದ ಗುತ್ತಿನ ಮನೆಗೆ ಹೋಗಲಿರುವ ಕಾರಣ ರಸ್ತೆಯಲ್ಲಿದ್ದ ಮರಮಟ್ಟನ್ನು ಕಡಿದು 10ಲೋಡು ಮಣ್ಣು ಹಾಕುವುದು.
8. 6ನೇ ವಾರ್ಡು ಮಾರ್ಗತಲೆ ಹೊಯಿಗೆ ಸೇತುವೆ ಮುಂದಿನ ರಸ್ತೆಗೆ – 10ಲೋಡು

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 167: ಉಳ್ಳಾಲ ಪುರಸಭೆ ವ್ಯಾಪ್ತಿಯ 26ನೇ ವಾರ್ಡುನ ಕಲ್ಲಾಪು ತಾರಿಪಡ್ಪು ಮುಡಿಪೋಡಿಗಳಲ್ಲಿ 21/2ಇಂಚಿನ HDPF 300ಮೀಟರ್ ಕೊಳವೆ ವಿಸ್ತರಣೆ ಮಾಡುವರೇ ಸ್ಥಳೀಯ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ಇವರ ಮನವಿ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:168: ಉಳ್ಳಾಲ ಪುರಸಭೆ ವ್ಯಾಪ್ತಿಯ 23ನೇ ವಾರ್ಡುನಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಮಾಡುವಂತೆ ಸ್ಥಳೀಯ ಸದಸ್ಯರಾದ ಶ್ರೀಮತಿ ಸುಹಾಸಿನಿ.ಜೆ. ಇವರ ಮನವಿ ಕುರಿತು.

1. ಬೊಡಂಗಿಲದಲ್ಲಿ ಹೊಸ ರಸ್ತೆಯಲ್ಲಿ 6ಅಡಿ ಎತ್ತರವಿರುವುದರಿಂದ ಮಣ್ಣು ಜರಿಯದ ಹಾಗೆ ಪಿಟ್ಟಿಂಗ್ ಮಾಡುವುದು
2. ಬೊಡಂಗಿಲ ತಿರುವಿಗೆ 250ಮೀಟರ್ ಪೈಪುಲೈನು ವಿಸ್ತರಣೆ ಮಾಡುವುದು

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 169: ಉಳ್ಳಾಲ ಪುರಸಭೆ ವ್ಯಾಪ್ತಿಯ 4ನೇ ವಾರ್ಡು ಬಂಡಿಕೊಟ್ಯ ಶೀನ ಸಪಲ್ಯರವರ ಮನೆ ಬಳಿಯಿಂದ ಮೆಸ್ಕಾಂ ಉಪೇಂದ್ರರವರ ಮನೆಯತನಕ ಸಾರ್ವಜನಿಕ ತೋಡು ರಚನೆ ಮಾಡುವಂತೆ ಸ್ಥಳೀಯ ಸದಸ್ಯರಾದ ಶ್ರೀ ಯು.ಕೆ ಗೋಪಾಲ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 170: ಉಳ್ಳಾಲ ಪುರಸಭೆ ಕಚೇರಿಯ ಬಳಿ ಇರುವ ಮಹಾತ್ಮಗಾಂಧಿ ರಂಗಮಂದಿರದ ಮೈದಾನದಲ್ಲಿ ಇರುವ ಮಣ್ಣಿನ ರಾಶಿಯನ್ನು ಬೇರೆ ಕಡೆಗೆ ಸಾಗಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಬೇರೆ ಕಡೆಗೆ ಸಾಗಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:171: ಉಳ್ಳಾಲ ಪುರಸಭೆ ವ್ಯಾಪ್ತಿಯ ಈ ಕೆಳಗಿನ ಸ್ಥಳಗಳಲ್ಲಿ ಕುಡಿಯುವ ನೀರಿನ ಕಾಮಗಾರಿಯನ್ನು ಮಾಡುವ ಬಗ್ಗೆ ಸದ್ರಿ ಕಚೇರಿಯ ಪಂಪುಚಾಲಕರ ವರದಿ ಕುರಿತು.

1. ಒಂಬತ್ತುಕೆರೆ ಪ್ರದೇಶಗಳಲ್ಲಿ ನೀರಿನ ಅಭಾವ ಇರುವುದರಿಂದ ಕೆ.ಹೆಚ್.ಬಿ. ಕಾಲನಿಯಲ್ಲಿ ಎರಡು ಕೊಳವೆಬಾವಿಗಳಿಗೆ ಪಂಪು ಅಳವಡಿಸಿದ್ದು ಕೊಳವೆಬಾವಿಯಲ್ಲಿ ಸಾಕಷ್ಟು ನೀರು ಬರುವುದರಿಂದ ಒಂದು ಕೊಳವೆಬಾವಿಗೆ ಅಳವಡಿಸಿದ ಪಂಪಿನ ನೀರನ್ನು ಒಂಬತ್ತುಕೆರೆ ಟಾಂಕಿಗೆ ಅಳವಡಿಸಿರುವ 6 ಇಂಚು ಪಿವಿಸಿ ಕೊಳವೆಗೆ ಗೇಟ್‌ವಾಲ್ ಅಳವಡಿಸಿ ಒಂಬತ್ತುಕೆರೆ ಮತ್ತು ಸುಂದರಿಬಾಗ್ ಪ್ರದೇಶಗಳ ನೀರಿನ ಸಮಸ್ಯೆಯನ್ನು ಬಗೆಹರಿಸುವುದು.
2. ಒಂಬತ್ತುಕೆರೆ ಕೆ.ಎಚ್.ಬಿ. ಕಾಲೋನಿಯಲ್ಲಿರುವ 2 ಕಿರುನೀರು ಸರಬರಾಜು ಯೋಜನೆಗೆ ಅಳವಡಿಸಿದ 2 ಕೊಳವೆಬಾವಿಯ ಕಬ್ಬಿಣದ ಪಂಪುಹೌಸ್ ಪೂರ್ತಿ ಹಾಳಾಗಿದ್ದು ಬದಲಿ ಪ್ರಿಕಾಸ್ಟ್, ಸಿಮೆಂಟು ಪಂಪುಹೌಸನ್ನು

ಅಳವಡಿಸಿ ಪೆನಲ್ ಬೋರ್ಡ್ಗು ಮೀಟರ್ ಬೋರ್ಡ್ಗು ವಿದ್ಯುತ್ ವಯರಿಂಗ್ ಕೆಟ್ಟಿದ್ದು ಇದನ್ನು ಬದಲಾಯಿಸಿ ಹೊಸ ವಿದ್ಯುತ್ ಎಯರಿಂಗ್ ಮಾಡುವುದು.

3. ಮುಕ್ಕಚೇರಿ ಹಿಲರಿನಗರ ಮತ್ತು ಸುಭಾಸ್‌ನಗರ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಇರುವುದರಿಂದ ಸುಭಾಸ್‌ನಗರದಲ್ಲಿ ಹೊಸ ಕಿರುನೀರು ಸರಬರಾಜು ಯೋಜನೆಯನ್ನು ಮಾಡಿ ನೀರಿನ ಸಮಸ್ಯೆ ಬಗೆಹರಿಸುವುದು.
4. ಕೋಡಿ ಕೆಳಗಿನಬೀದಿ ತೋಟ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಇರುವುದರಿಂದ ಕೋಡಿ ಕಿರುನೀರು ಸರಬರಾಜು ಯೋಜನೆಯ ನೀರಿನ ಕೊಳವೆಗೆ 2ಗೇಟ್‌ವಾಲ್ ಅಳವಡಿಸಿ ತೋಟ ಪ್ರದೇಶಗಳ ನೀರಿನ ಸಮಸ್ಯೆಯನ್ನು ಬಗೆಹರಿಸುವುದು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 172: ಉಳ್ಳಾಲ ಪುರಸಭೆ ವ್ಯಾಪ್ತಿಯ 24ನೇ ವಾರ್ಡಿನಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಮಾಡುವಂತೆ ಕಿರಿಯ ಅಭಿಯಂತರರ ವರದಿ ಕುರಿತು

1) ಚೆಂಬುಗುಡ್ಡೆ ಬಸ್ಸು ನಿಲ್ದಾಣದಿಂದ ದಾರಂದಬಾಗಿಲುವರೆಗೆ ರಸ್ತೆಯ ಎಡಬದಿ ಮಣ್ಣು ತೆಗೆದು ಸಮತಟ್ಟುಗೊಳಿಸುವುದು
2) ಚೆಂಬುಗುಡ್ಡೆ ಬಸ್ಸು ನಿಲ್ದಾಣದಿಂದ ದಾರಂದಬಾಗಿಲುವರೆಗೆ ರಸ್ತೆಯ ಬಲಬದಿ ಮಣ್ಣು ತೆಗೆದು ಸಮತಟ್ಟುಗೊಳಿಸವುದು

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ಸಹಿ. ಅಧ್ಯಕ್ಷರು ಮತ್ತು ಸದಸ್ಯರು

(ಯಥಾಪ್ರತಿ)

ಮುಖ್ಯಾಧಿಕಾರಿ
ಉಳ್ಳಾಲ ಪುರಸಭೆ,ದ.ಕ